# ಕರ್ನಾಟಕ ವಿಧಾನ ಪರಿಷತ್ತು

**ಸದಸ್ಯರ ಹೆಸರು** : ಶ್ರೀ. ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 899(1000)

**ಉತ್ತರ ದಿನಾಂಕ** : 23/02/2024

**ಉತ್ತರಿಸುವವರು** : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ | ಕೇಂದ್ರ ಸರ್ಕಾರದ ಯೋಜನೆಯಾದ "ಜಲ ಜೀವನ್ ಮಿಷನ್" ಅಡಿಯಲ್ಲಿ ಕೊಡಗು ಜಿಲ್ಲೆಯ ಎಷ್ಟು ಮನೆಗಳಿಗೆ ನಲ್ಲಿ (ಕೊಳಾಯಿ) ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗಿದೆ; | ಕೇಂದ್ರ ಪುರಷ್ಕೃತ ಯೋಜನೆಯಾದ "ಜಲ ಜೀವನ್ ಮಿಷನ್" ಅಡಿಯಲ್ಲಿ ಕೊಡಗು ಜಿಲ್ಲೆಯಲ್ಲಿ ಒಟ್ಟು 1,35,871 ಗ್ರಾಮೀಣ ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ ಒದಗಿಸಲು ಯೋಜಿಸಲಾಗಿದ್ದು,ಇದುವರೆಗೆ ಒಟ್ಟು 1,16,085 ಮನೆಗಳಿಗೆ ನಳ ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗಿರುತ್ತದೆ. |
| ಆ | "ಜಲ ಜೀವನ್ ಮಿಷನ್" ಯೋಜನೆ ಅಡಿಯಲ್ಲಿ ಕೊಡಗು ಜಿಲ್ಲೆಗೆ ಮಂಜೂರಾಗಿರುವ ಅನುದಾನ ವಿನಿಯೋಗಿಸಲಾದ ಅನುದಾನ ಹಾಗೂ ಬಾಕಿ ಉಳಿದಿರುವ ಅನುದಾನ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | "ಜಲ ಜೀವನ್ ಮಿಷನ್" ಯೋಜನೆ ಅಡಿಯಲ್ಲಿ ಕೊಡಗು ಜಿಲ್ಲೆಗೆ ಮಂಜೂರಾಗಿರುವ ಅನುದಾನ, ವಿನಿಯೋಗಿಸಲಾದ ಅನುದಾನ ಹಾಗೂ ಬಾಕಿ ಉಳಿದಿರುವ ಅನುದಾನದ ಮಾಹಿತಿ ಈ ಕೆಳಗಿನಂತಿವೆ. (ರೂ.ಕೋಟಿಗಳಲ್ಲಿ.) |

ರೂ.ಕೋಟಿಗಳಲ್ಲಿ.

| ಕ್ರ.ಸಂ | ತಾಲ್ಲೂಕು | ಮಂಜೂರಾದ ಅನುದಾನ | ವಿನಿಯೋಗಿಸಲಾದ ಅನುದಾನ | ಬಾಕಿ ಉಳಿದಿರುವ ಅನುದಾನ |
|---|---|---|---|---|
| 1 | ಮಡಿಕೇರಿ | 152.24 | 53.24 | 99.00 |
| 2 | ಸೋಮವಾರಪೇಟೆ | 111.70 | 67.34 | 44.36 |
| 3 | ವಿರಾಜಪೇಟೆ | 94.77 | 34.97 | 59.80 |
| | **ಒಟ್ಟು** | **358.71** | **155.55** | **203.16** |

| ಕ್ರ ಸಂ | ಪ್ರಶ್ನೆ | ಉತ್ತರಗಳು |
|---|---|---|
| ಇ | ಈ ಯೋಜನೆಯಲ್ಲಿ ಉತ್ತಮ ಗುಣಮಟ್ಟದ ಕಾಮಗಾರಿಗಳು ನಡೆದಿವೆಯೇ; ಸಂಬಂಧಪಟ್ಟ ತಾಲ್ಲೂಕುಗಳಲ್ಲಿ ಸ್ಥಳ ಪರಿಶೀಲನೆ ಮಾಡಲಾಗಿದೆಯೇ? (ಪರಿಶೀಲಿಸಿದ ಅಧಿಕಾರಿಗಳ ವಿವರ ನೀಡುವುದು? | "ಜಲ್ ಜೀವನ್ ಮಿಷನ್" ಯೋಜನೆಯಡಿಯಲ್ಲಿ ಕೊಡಗು ಜಿಲ್ಲೆಯಲ್ಲಿ ಉತ್ತಮ ಗುಣಮಟ್ಟದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲಾಗಿದ್ದು, ಸಂಬಂಧಪಟ್ಟ ತಾಲ್ಲೂಕುಗಳಲ್ಲಿ ಕಾಮಗಾರಿಳನ್ನು TPIA (Third party Inspection Agency) ಯಿಂದ ಹಾಗೂ ಇಲಾಖೆ ಯಿಂದ ನೇಮಿಸಿರುವ SQMs (State Quality Monitors) ರವರಿಂದ ಕಾಲಕಾಲಕ್ಕೆ ಸ್ಥಳ ಪರಿಶೀಲನೆ ಮಾಡಲಾಗಿರುತ್ತದೆ. ಅಲ್ಲದೇ ಕೇಂದ್ರ ಸರ್ಕಾರ ನಿಯೋಜಿಸಿರುವ WASH (Water and Sanitation Hygiene) ಅಧಿಕಾರಿ ರವರಿಂದ ಹಾಗೂ ಅಧೀಕ್ಷಕ ಇಂಜಿನಿಯರ್, ಗ್ರಾ.ಕು,ನೀ&ನೈ-ವೃತ್ತ, ಮಂಗಳೂರು ರವರಿಂದ ಸಹ ಸ್ಥಳ ಪರಿಶೀಲನೆ ಮಾಡಲಾಗಿರುತ್ತದೆ. |

ಸಂ:ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/28/2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು